# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 241
2) ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸಬೇಕಾದ ದಿನಾಂಕ : 15-02-2023
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾಗರ ಮತ್ಸ್ಯ ನೀತಿಯಂತೆ ಸ್ಥಳೀಯ ಮೀನು - ಕೃಷಿಕರು ಮತ್ತು ಅವುಗಳ ಸಂಘ-ಸಂಸ್ಥೆಗಳನ್ನೊಳಗೊಂಡಂತೆ ಸಾಗರದಲ್ಲಿ ಮತ್ಸ್ಯ ಸಂಪತ್ತನ್ನು ವ್ಯವಸ್ಥಿತ ರೀತಿಯಲ್ಲಿ ಕಾಪಾಡಲು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ನೆರವಿನೊಂದಿಗೆ ರಾಜ್ಯ ಸರ್ಕಾರ ರೂಪಿಸಿರುವ ಕಾರ್ಯಕ್ರಮ ಮತ್ತು ಯೋಜನೆಗಳು ಯಾವುವು; | ಸಾಗರದಲ್ಲಿನ ಮತ್ಸ್ಯಸಂಪತ್ತನ್ನು ವ್ಯವಸ್ಥಿತ ರೀತಿಯಲ್ಲಿ ಕಾಪಾಡಲು ರಾಜ್ಯ ಸರ್ಕಾರವು ಈ ಕೆಳಗಿನಂತೆ ನೀತಿಯನ್ನು ರೂಪಿಸಿದೆ.<br>1. ಹೊಸ ಯಾಂತ್ರಿಕ ಮೀನುಗಾರಿಕೆ ದೋಣಿಗಳ ನೋಂದಣಿಯನ್ನು ನಿಯಂತ್ರಿಸಿದೆ.<br>2. ಹೊಸ ಪರ್ಸೀನ್ ದೋಣಿಗಳ ನೋಂದಣಿಯನ್ನು ಸ್ಥಗಿತಗೊಳಿಸಲಾಗಿದೆ.<br>3. ಬುಲ್ ಟ್ರಾಲಿಂಗ್ ನಿಷೇಧ<br>4. ಬೆಳಕು ಮೀನುಗಾರಿಕೆ ನಿಷೇಧ.<br>5. ದೋಣಿಗಳ ಇಂಜಿನ್ ಅಳವಡಿಕೆಯಲ್ಲಿ ಅಶ್ವಶಕ್ತಿಯನ್ನು ಗರಿಷ್ಟ 350 ಹೆಚ್.ಪಿ.ಗೆ ಸೀಮಿತಗೊಳಿಸಿದೆ.<br>6. ಎಲ್ಲಾ ದೋಣಿಗಳ ನೋಂದಣಿ ಮತ್ತು ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಿದೆ.<br>7. ಪ್ರತಿವರ್ಷ ಜೂನ್-01 ರಿಂದ ಜುಲೈ-31 ರವರೆಗೆ 10 ಹೆಚ್.ಪಿ.ಗಿಂತ ಮೇಲ್ಪಟ್ಟು ಇಂಜಿನ್‌ವುಳ್ಳ ಮೋಟಾರೈಸ್ಡ್ ಮತ್ತು ಯಾಂತ್ರಿಕೃತ ದೋಣಿಗಳ ಬಳಕೆಯನ್ನು ನಿಷೇಧಿಸಿದೆ.<br>8. ಮೀನುಗಾರರು ಹಿಡಿಯುವ ಪ್ರಮುಖ 19 ಜಾತಿಯ ಮೀನುಗಳಿಗೆ ಕನಿಷ್ಟ ಗಾತ್ರದ ಮಿತಿ ನಿಗದಿಪಡಿಸಲಾಗಿದೆ.<br>9. ಟ್ರಾಲ್ ದೋಣಿಗಳಲ್ಲಿ 35 ಮಿಲಿ.ಮೀಟರ್ ಸ್ಕ್ವಯರ್ ಮೆಶ್ ಕಾಡ್ ಎಂಡ್ ಇರುವ ಬಲೆಗಳ ಬಳಕೆಯನ್ನು ಕಡ್ಡಾಯಗೊಳಿಸಲಾಗಿದೆ.<br>10. ಚೌರಿ ಉಪಯೋಗಿಸಿ ಕಪ್ಪೆಬಂಡಾಸ್ ಮೀನುಗಾರಿಕೆ ಮಾಡುವುದನ್ನು ನಿಷೇಧಿಸಲಾಗಿದೆ.<br>11. 20 ಎಂ.ಎಂ. ಮೆಶ್ ಗಾತ್ರದ ಮೇಲ್ಪಟ್ಟು ಗಿಲ್‌ನೆಟ್ ಬಳಸುವುದನ್ನು ಕಡ್ಡಾಯಗೊಳಿಸಲಾಗಿದೆ.<br>12. ತೀರ ಸಮುದ್ರದ ಪ್ರದೇಶದಲ್ಲಿ ಮೀನುಗಾರಿಕೆ ಒತ್ತಡವನ್ನು ಕಡಿಮೆ ಮಾಡಿ ಆಳಸಮುದ್ರ ಪ್ರದೇಶದಲ್ಲಿ ಬಳಸಿಕೊಳ್ಳದ ಮೀನಿನ ಸಂಪತ್ತನ್ನು ಹಿಡುವಳಿ ಮಾಡಲು ಆಳಸಮುದ್ರ ಮೀನುಗಾರಿಕೆಗಾಗಿ ಉತ್ತೇಜನ ನೀಡಲು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯೊಂದಿಗೆ ಸಂಯೋಜಿಸಿ "ಮತ್ಸ್ಯಸಿರಿ" ಎಂಬ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದರಲ್ಲಿ 100 ಆಳಸಮುದ್ರ ಮೀನುಗಾರಿಕೆ ದೋಣಿಗಳನ್ನು ನಿರ್ಮಾಣ ಮಾಡಲು ಗುರಿ ಹೊಂದಲಾಗಿದೆ.<br><br>ಕರ್ನಾಟಕ ಕಡಲು ಮೀನುಗಾರಿಕೆ ನಿಯಂತ್ರಣ ಕಾಯ್ದೆ, 1986 ನ್ನು ಜಾರಿಗೊಳಿಸಿದೆ.<br><br>ಸಾಗರದಲ್ಲಿನ ಮತ್ಸ್ಯಸಂಪತ್ತನ್ನು ವ್ಯವಸ್ಥಿತ ರೀತಿಯಲ್ಲಿ ಕಾಪಾಡಲು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ 2022-23ನೇ ಸಾಲಿನಿಂದ ಹೊಸದಾಗಿ ಆರ್ಟಿಫಿಶಿಯಲ್ ರೀಫ್ ಮತ್ತು / ಅಥವ ಸೀ ರಾಂಚಿಂಗ್ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. |

| | | |
|---|---|---|
| ಆ) | ಈ ಕಾರ್ಯಕ್ರಮ ಮತ್ತು ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ವೆಷ್ಟು; ಮತ್ತು ರಾಜ್ಯ ಸರ್ಕಾರ ಪೂರಕವಾಗಿ ನೀಡಿರುವ ಅನುದಾನವೆಷ್ಟು; (ಕಳೆದ ಮೂರು ವರ್ಷಗಳ ಜಿಲ್ಲಾವಾರು, ಯೋಜನೆವಾರು ಮತ್ತು ವರ್ಷವಾರು ಆರ್ಥಿಕ ಮತ್ತು ಭೌತಿಕ ವಿವರ ಒಳಗೊಂಡ ಮಾಹಿತಿ ನೀಡುವುದು) | ಈ ಕಾರ್ಯಕ್ರಮ ಮತ್ತು ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನ ಮತ್ತು ರಾಜ್ಯ ಸರ್ಕಾರ ಪೂರಕವಾಗಿ ನೀಡಿರುವ ಅನುದಾನದ ಕಳೆದ ಮೂರು ವರ್ಷಗಳ ಜಿಲ್ಲಾವಾರು, ಯೋಜನೆವಾರು ಮತ್ತು ವರ್ಷವಾರು ಆರ್ಥಿಕ ಮತ್ತು ಭೌತಿಕ ವಿವರ ಒಳಗೊಂಡ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ) | ರಾಜ್ಯದಲ್ಲಿ ಸಾಗರ ಮತ್ಸ್ಯ ವನ್ನು ಸಂರಕ್ಷಿಸಲು ಮತ್ತು ವಿವಿಧ ಯೋಜನೆ ಗಳನ್ನು ನಿರ್ವಹಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಗುರುತಿಸಿರುವ ಇಲಾಖೆಗಳು ಮತ್ತು ಸಂಸ್ಥೆಗಳು ಯಾವುವು; ಈ ಸಂಸ್ಥೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೆರವಿನಿಂದ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು; ನೀಡಿರುವ ಅನುದಾನವೆಷ್ಟು; (ಸಂಪೂರ್ಣ ವಿವರದೊಂದಿಗೆ ಮಾಹಿತಿ ನೀಡುವುದು) | ರಾಜ್ಯದಲ್ಲಿ ಸಾಗರ ಮತ್ಸ್ಯವನ್ನು ಸಂರಕ್ಷಿಸಲು ಮತ್ತು ವಿವಿಧ ಯೋಜನೆಗಳನ್ನು ನಿರ್ವಹಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಗುರುತಿಸಿರುವ ಇಲಾಖೆಗಳು ಮತ್ತು ಸಂಸ್ಥೆಗಳು ಈ ಕೆಳಗಿನಂತಿದೆ.<br>1. ಮೀನುಗಾರಿಕೆ ಇಲಾಖೆ.<br>2. ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು.<br>3. ಸೆಂಟ್ರಲ್ ಮೆರೈನ್ ಫಿಶರೀಸ್ ರಿಸರ್ಚ್ ಇನ್ಸ್ಟಿಟ್ಯೂಟ್.<br>4. ಮೆರೈನ್ ಪ್ರಾಡಕ್ಟ್ಸ್ ಎಕ್ಸ್ಪೋರ್ಟ್ ಡೆವಲಪ್‌ಮೆಂಟ್ ಅಥಾರಿಟಿ.<br>5. ಅರಣ್ಯ, ಪರಿಸರ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಇಲಾಖೆಗಳು.<br>6. ಕರ್ನಾಟಕ ಮ್ಯಾರಿಟೈಮ್ ಬೋರ್ಡ್.<br>7. ಎಕ್ಸ್‌ಪೋರ್ಟ್ ಇನ್ಸ್‌ಪೆಕ್ಷನ್ ಏಜೆನ್ಸಿ.<br>ರಾಜ್ಯದಲ್ಲಿ ಸಾಗರ ಮತ್ಸ್ಯವನ್ನು ಸಂರಕ್ಷಿಸಲು ಮೀನುಗಾರಿಕೆ ಇಲಾಖೆಯಿಂದ ಕೈಗೊಂಡಿರುವ ಕಾರ್ಯಕ್ರಮ ಗಳನ್ನು/ಯೋಜನೆಗಳನ್ನು ಮತ್ತು ಅನುಷ್ಠಾನದ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. ಇದಲ್ಲದೆ, ಮೀನುಗಾರಿಕೆ ಇಲಾಖೆಯ ಜೊತೆ ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು, ಮೆರೈನ್ ಪ್ರಾಡಕ್ಟ್ಸ್ ಎಕ್ಸ್ಪೋರ್ಟ್ ಡೆವಲಪ್‌ಮೆಂಟ್ ಅಥಾರಿಟಿ, ಮತ್ತು ಸೆಂಟ್ರಲ್ ಮೆರೈನ್ ಫಿಶರೀಸ್ ರಿಸರ್ಚ್ ಇನ್ಸ್ಟಿಟ್ಯೂಟ್, ಸಂಸ್ಥೆಗಳು ಸಹಭಾಗಿತ್ವದಲ್ಲಿ ಸಾಗರ ಮತ್ಸ್ಯಸಂಪತ್ತನ್ನು ಸಂರಕ್ಷಿಸುವ ದೃಷ್ಟಿಯಿಂದ ಮೀನುಗಾರರಿಗೆ ಜಾಗೃತಿ ಶಿಬಿರ, ತರಬೇತಿ ಕಾರ್ಯಕ್ರಮ ವಿಚಾರ ಸಂಕಿರಣಗಳನ್ನು ಕಾಲಕಾಲಕ್ಕೆ ಏರ್ಪಡಿಸಲಾಗುತ್ತಿದೆ. |

ಸಂಖ್ಯೆ: ಪಸಂಮೀ ಇ-27 ಮೀಇಯೋ 2023

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-281(241)ಕ್ಕೆ ಉತ್ತರ

## ಅನುದಾನ ಬಿಡುಗಡೆ ಕುರಿತು ಮಾಹಿತಿ

| ಜಿಲ್ಲೆ | ಯೋಜನೆ | ಭೌತಿಕ | ಕೇಂದ್ರ ಸರಕಾರದಿಂದ ಬಂದ ಅನುದಾನ (ರೂ ಲಕ್ಷಗಳಲ್ಲಿ) | ರಾಜ್ಯ ಸರಕಾರದಿಂದ ಬಂದ ಅನುದಾನ (ರೂ ಲಕ್ಷಗಳಲ್ಲಿ) | ಒಟ್ಟು ಅನುದಾನ ಬಿಡುಗಡೆ (ರೂ ಲಕ್ಷಗಳಲ್ಲಿ) | ವೆಚ್ಚ (ರೂ ಲಕ್ಷಗಳಲ್ಲಿ) |
|---|---|---|---|---|---|---|
| **2019-20 ನೇ ಸಾಲು** | | | | | | |
| ದಕ್ಷಿಣ ಕನ್ನಡ | ಟ್ರಾಲ್ ದೋಣಿಗಳಿಗೆ 35 ಎಂಎಂ ಕಣ್ಣಿನ ಚೌಕಾಕಾರದ ಕಾಡ್ ಎಂಡ್ ಬಲೆಗಳ ವಿತರಣೆ | | 0 | 0 | 0 | 0 |
| ಉಡುಪಿ | | | 0 | 0 | 0 | 0 |
| ಉತ್ತರ ಕನ್ನಡ | | | 0 | 0 | 0 | 0 |
| ದಕ್ಷಿಣ ಕನ್ನಡ | ನೀಲಿ ಕ್ರಾಂತಿ ಯೋಜನೆ- ಪಚ್ಚಿಲೆ ಕೃಷಿ | | 0 | 0 | 0 | 0 |
| ಉಡುಪಿ | | 156 | 6.156 | 4.104 | 10.260 | 10.260 |
| ಉತ್ತರ ಕನ್ನಡ | | | 0 | 0 | 0 | 0 |
| **2020-21 ನೇ ಸಾಲು** | | | | | | |
| ದಕ್ಷಿಣ ಕನ್ನಡ | ಟ್ರಾಲ್ ದೋಣಿಗಳಿಗೆ 35 ಎಂಎಂ ಕಣ್ಣಿನ ಚೌಕಾಕಾರದ ಕಾಡ್ ಎಂಡ್ ಬಲೆಗಳ ವಿತರಣೆ | | 0 | 0 | 0 | 0 |
| ಉಡುಪಿ | | | 0 | 0 | 0 | 0 |
| ಉತ್ತರ ಕನ್ನಡ | | | 0 | 0 | 0 | 0 |
| ದಕ್ಷಿಣ ಕನ್ನಡ | ನೀಲಿ ಕ್ರಾಂತಿ ಯೋಜನೆ- ಪಚ್ಚಿಲೆ ಕೃಷಿ | | 0 | 0 | 0 | 0 |
| ಉಡುಪಿ | | | 0 | 0 | 0 | 0 |
| ಉತ್ತರ ಕನ್ನಡ | | | 0 | 0 | 0 | 0 |
| **2021-22 ನೇ ಸಾಲು** | | | | | | |
| ದಕ್ಷಿಣ ಕನ್ನಡ | ಟ್ರಾಲ್ ದೋಣಿಗಳಿಗೆ 35 ಎಂಎಂ ಕಣ್ಣಿನ ಚೌಕಾಕಾರದ ಕಾಡ್ ಎಂಡ್ ಬಲೆಗಳ ವಿತರಣೆ | | 0 | 0 | 0 | 0 |
| ಉಡುಪಿ | | | 0 | 0 | 0 | 0 |
| ಉತ್ತರ ಕನ್ನಡ | | | 0 | 0 | 0 | 0 |
| ದಕ್ಷಿಣ ಕನ್ನಡ | ನೀಲಿ ಕ್ರಾಂತಿ ಯೋಜನೆ- ಪಚ್ಚಿಲೆ ಕೃಷಿ | | 0 | 0 | 0 | 0 |
| ಉಡುಪಿ | | | 0 | 0 | 0 | 0 |
| ಉತ್ತರ ಕನ್ನಡ | | | 0 | 0 | 0 | 0 |

——— xxx ———